## 15. ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆ – ಹೊಸನಗರ.




1924 ರಲ್ಲಿ ಆರಂಭವಾದ ಈ ಶಾಸಕರ ಸರ್ಕಾರಿ ಮಾದರಿ ಹಿರಿಯ ಪ್ರಾಥಮಿಕ ಹೆಣ್ಣು ಮಕ್ಕಳ ಶಾಲೆಯು 93 ವರ್ಷಗಳನ್ನು ಪೂರೈಸಿ, 94ನೇ ವರ್ಷಕ್ಕೆ ಕಾಲಿಟ್ಟಿರುವುದು ಹೆಮ್ಮೆಯ ವಿಷಯ. ನಾವು ಮತ್ತು ನಮ್ಮ ಶಾಲೆಯು ನಡೆದು ಬಂದ ಹಾದಿಯನ್ನು ಇದೀಗ ಯಶೋಗಾಥೆ ರೂಪದಲ್ಲಿ ತಮ್ಮ ಮುಂದಿಡುತ್ತೇವೆ.

ನಮ್ಮ ಶಾಲೆಯು ಹೊಸನಗರದ ಕೇಂದ್ರ ಭಾಗದಲ್ಲಿ ಇದ್ದು, ಇದು ಯಾವಾಗಲೂ ಚಟುವಟಿಕೆಯಿಂದ, ಹೊಸ ಚಿಂತನೆಯಿಂದ ಹಾಗೂ ಅದನ್ನು ಅಳವಡಿಸಿಕೊಳ್ಳುವ ಶಾಲೆಯಾಗಿದೆ. ಈ ಶಾಲೆಯು **" ಸ್ವಚ್ಛ, ಸುಂದರ, ಕ್ರಿಯಾಶೀಲ, ಗುಣಾತ್ಮಕ ಶಿಕ್ಷಣ "** ನೀಡುವ ಧ್ಯೇಯವನ್ನು ಹೊಂದಿದೆ.





ಇದರಂತೆ ಶಾಲೆಯ ಎಸ್.ಡಿ.ಎಂ.ಸಿ., ಅದರ ಅಧ್ಯಕ್ಷರಾದ ಕೆ.ಕೆ.ಅಶ್ವಿನಿಕುಮಾರ್‌ರವರು ಸದಾ ಪಾದರಸದಂತೆ ಕ್ರಿಯಾಶೀಲರಾಗಿದ್ದು ಸದಾ ಒಂದಿಲ್ಲೊಂದು ಯೋಜನೆ, ಚಿಂತನೆ, ಹೊತ್ತು ನಮ್ಮನ್ನು ಅದರಲ್ಲಿ ತೊಡಗಿಸಿಕೊಳ್ಳುವಂತೆ ಹಾಗೂ ಉತ್ತಮ ಶಿಕ್ಷಣ ನೀಡುವಲ್ಲಿ ನಾವು ಏನೇ ಚಟುವಟಿಕೆ ಹಮ್ಮಿಕೊಂಡರೂ ಆದನ್ನ

ಪ್ರೋತ್ಸಾಹಿಸಿ ಆ ಚಟುವಟಿಕೆಯಲ್ಲಿ ಅವರೂ ಭಾಗಿಯಾಗಿ ತಮ್ಮ ಎಸ್.ಡಿ.ಎಂ.ಸಿ ಸದಸ್ಯರುಗಳ ತಂಡವನ್ನು ತೊಡಗಿಸಿಕೊಳ್ಳುತ್ತಾರೆ.




ಎಪ್ರಿಲ್–5–2017 ನಮ್ಮ ಶಾಲೆಯ ಸಾಧನೆಯ ಹಾದಿಯಲ್ಲಿ ಮಹತ್ವದ ಮೈಲಿಗಲ್ಲು. 2016–17 ಸಾಲಿನ 2ನೇ ಸಮುದಾಯದತ್ತ ಶಾಲಾ ದಿನವಾದ ಅಂದು ದಾನಿಗಳ ಸಹಾಯದಿಂದ ಖರೀದಿಸಿದ ಶಾಲಾ ವಾಹನವನ್ನು ಉದ್ಘಾಟಿಸಲಾಯಿತು.ವಾಹನ ಸೌಲಭ್ಯವಿದೆ ಎಂಬ ಕಾರಣಕ್ಕಾಗಿ ಖಾಸಗಿ ಶಾಲೆಗಳತ್ತ ಮುಖಮಾಡಿದ್ದ ಪೋಷಕರನ್ನ ತನ್ನತ್ತ ಸೆಳೆದುಕೊಳ್ಳುವಲ್ಲಿ ನಮ್ಮ ಪ್ರಯತ್ನ ಸಫಲವಾದ ದಿನವದು. ಪರಿಣಾಮವಾಗಿ ಇಂದು 62 ಮಕ್ಕಳು ಶಾಲಾ ವಾಹನದಲ್ಲಿ ಶಾಲೆಗೆ ಬಂದು ಹೋಗುತ್ತಿದ್ದಾರೆನ್ನಲು ಹೆಮ್ಮೆ ಎನಿಸುತ್ತಿದೆ. ಹಾಗೆಯೆ 2017–18 ನೇ ಸಾಲಿನಲ್ಲಿ  ಮಕ್ಕಳ ದಾಖಲಾತಿ ಹೆಚ್ಚಳವಾಯಿತು, ಎಂಬುದು ಸಂತೋಷದ ವಿಷಯ.

ನಮ್ಮಲ್ಲಿ ಈಗಾಗಲೇ 7 ಕಂಪ್ಯೂಟರ್‌ಗಳಿದ್ದು, ಕರೆಂಟು ಇಲ್ಲವಾದಲ್ಲಿ ಮಕ್ಕಳಿಗೆ ಕಂಪ್ಯೂಟರ್ ಶಿಕ್ಷಣ ಪಡೆಯುವಲ್ಲಿ ತೊಂದರೆಯಾಗುತಿತ್ತು. ಇದನ್ನು ಮನಗಂಡು 10 ಲ್ಯಾಪ್‌ಟಾಪ್‌ಗಳನ್ನ ದಾನಿಗಳ ಸಹಾಯ ಪಡೆದು ತರಲಾಯಿತು.ಕಂಪ್ಯೂಟರ್ ಬೋಧನೆಗೆ ಒಬ್ಬರು ನುರಿತ ಕಂಪ್ಯೂಟರ್ ಶಿಕ್ಷಕರನ್ನು ಎಸ್,ಡಿ,ಎಂ,ಸಿ ವತಿಯಿಂದ ನಿಯೋಜಿಸಲಾಗಿದೆ. ಈ ಮೂಲಕ ಕಂಪ್ಯೂಟರ್ ಶಿಕ್ಷಣ ಸುಲಲಿತವಾಗಿ ನೆಡೆಯುತ್ತಿದೆ. ಅಷ್ಟೇ ಅಲ್ಲದೇ 3 ಬೋಧನಾ ಕೊಠಡಿಗಳಿಗೆ ಹಾಗೂ ಆಟದ ಮೈದಾನಕ್ಕೆ ಸಿ.ಸಿ ಕ್ಯಾಮರವನ್ನು ಅಳವಡಿಸಲಾಗಿದೆ. ಈ ಮೂಲಕ ಪರಿಣಾಮ ಕಾರಿಯಾದ ಬೋಧನೆಗೆ ಮತ್ತು ಮಕ್ಕಳ ಸ್ವಾಭಾವಿಕ ವರ್ತನೆಗಳನ್ನ ಅವಲೋಕಿಸಿ ಅವರಿಗೆ ಸೂಕ್ತ ಮಾರ್ಗದರ್ಶನ ನೀಡಲು ಸಹಕಾರಿಯಾಗಿದೆ. ಉತ್ತಮ ಗುಣಮಟ್ಟದ ಪೀಠೋಪಕರಣಗಳನ್ನು  ಈ ವರ್ಷದ  ಜೂನ್ ತಿಂಗಳಿನಲ್ಲಿ ಎಸ್.ಡಿ.ಎಂ.ಸಿ ಅಧ್ಯಕ್ಷರು, ದಾನಿಗಳ ಸಹಾಯಪಡೆದು ಶಾಲೆಗೆ ನೀಡಿರುತ್ತಾರೆ. “ಉದಾರ ಚರಿತಾನಾಂತು ವಸುಧೈವಕ ಕುಟುಂಬಕಂ” ಎಂಬಂತೆ ನಮ್ಮ ಶಾಲೆಯ ಶಿಕ್ಷಕರು ಮತ್ತು ಪೋಷಕರೆಲ್ಲರೂ ಒಂದೆ ಕುಟುಂಬದವರಂತೆ ಅನ್ಯೋನ್ಯ ಭಾವನೆ ಬೆಳೆಸಿಕೊಂಡಿರುವುದು ನಮ್ಮ ವಿಶೇಷತೆ. ಈ ಹಿನ್ನಲೆಯಲ್ಲಿ ಪೋಷಕರೆಲ್ಲ ಪರಸ್ಪರ ಬೆರೆತು, ಶಿಕ್ಷಕರ ಜೊತೆ ಮಗುವಿನ ಮತ್ತು ಶಾಲೆಯ ಅಭಿವೃದ್ಧಿ ಬಗ್ಗೆ ಚರ್ಚಿಸಲು ಕಳೆದ 4 ವರ್ಷಗಳಿಂದ ನಮ್ಮ ಶಾಲೆ ನಡೆಸಿಕೊಂಡು ಬಂದಿರುವ ವಿಶಿಷ್ಠ ಕಾರ್ಯಕ್ರಮ **“ಹೆತ್ತವರ ಚಿತ್ತ ಶಾಲೆಯತ್ತ”** ಎಂಬುದು. ದಿನಾಂಕ 20–6–2017 ರಂದು ನಮ್ಮ ಪೋಷಕ ವೃಂದ ಶಾಲೆಗೆ ಬಂದು ಹಲವಾರು ಚರ್ಚೆ ತೀರ್ಮಾನಗಳೊಂದಿಗೆ ಸ್ನೇಹಮಯವಾಗಿ ಬಾಂಧವ್ಯ ಕಟ್ಟಿಕೊಂಡು ಹೋಗಲು ಅವಕಾಶ ಕಲ್ಪಿಸಲಾಯಿತು. ಹಾಗೂ ಆ ದಿನದಂದು ಸರ್ಕಾರದ ಪ್ರೋತ್ಸಾಹದಾಯಕ ಕೊಡುಗೆಗಳಾದ ಸಮವಸ್ತ್ರ ,ಶೂ ,ಹೆಣ್ಣು ಮಕ್ಕಳ ಹಾಜರಾತಿ ಪ್ರೋತ್ಸಾಹ ಧನ ಇವುಗಳ ವಿತರಣೆ ನಡೆಸಲಾಯಿತು.









ಡಿಸೆಂಬರ್ 6–2017 ರಂದು "ಗಣ್ಯರಮಿಲನ" ಎಂಬ ವಿನೂತನ ಕಾರ್ಯಕ್ರಮವನ್ನು ಶಾಲೆಯಲ್ಲಿ ಹಮ್ಮಿಕೊಳ್ಳಲಾಗಿತ್ತು. ಆ ದಿನ ಸ್ಥಳೀಯ ಪ್ರಜ್ಞಾವಂತ ಗಣ್ಯರನ್ನ,ಅಧಿಕಾರಿಗಳನ್ನ ಶಾಲೆಗೆ ಆಹ್ವಾನಿಸಿ, ಶಾಲೆಯ ಸರ್ವತೋಮುಖ ಅಭಿವೃದ್ಧಿಗೆ ಸಲಹೆ–ಸೂಚನೆ ಮತ್ತು ಮಾರ್ಗದರ್ಶನವನ್ನು ಪಡೆಯಲಾಯಿತು.

---

2017–18 ನೇ ಸಾಲಿನ ವಾರ್ಷಿಕೋತ್ಸವವನ್ನ, **"ಮಕ್ಕಳ ಸಾಂಸ್ಕೃತಿಕ ವೈಭವ"** ಎಂಬ ಶೀರ್ಷಿಕೆ ಅಡಿಯಲ್ಲಿ ಅತ್ಯಂತ ವಿಜೃಂಭಣೆಯಿಂದ ಆಚರಿಸಲಾಯಿತು. ಸಾಂಸ್ಕೃತಿಕ ಕಾರ್ಯಕ್ರಮದ ನಿರೂಪಣೆಯನ್ನ ಮಕ್ಕಳು ಆಂಗ್ಲಭಾಷೆಯಲ್ಲಿ ನೆಡೆಸಿಕೊಟ್ಟು, ಪ್ರೇಕ್ಷಕರು ನಿಬ್ಬೆರಗಾಗುವಂತೆ ಮಾಡಿದರು.






ದಿನಾಂಕ 27–1–18 ರ ಪಲ್ಸ್ ಪೋಲಿಯೋ ಕಾರ್ಯಕ್ರಮದಂದು ನಮ್ಮ ಶಾಲೆಯ ವತಿಯಿಂದ ಚಾಕೋಲೇಟ್ಸ್ ಹಾಗೂ ಲಕ್ಕಿಡೀಪ್ ಕಾರ್ಯಕ್ರಮದ ಮೂಲಕ ವಿಜೇತ ಪುಟಾಣಿಗಳಿಗೆ ಎಸ್,ಡಿ,ಎಂ,ಸಿ ಯ ಪ್ರಾಯೋಜಕತ್ವದಲ್ಲಿ ಆಟೋಪಕರಣಗಳನ್ನು ವಿತರಿಸಲಾಯಿತು.ಈ ಕಾರ್ಯಕ್ರಮಕ್ಕೆ ಶಾಲಾ ಶಿಕ್ಷಕ ವೃಂದ ಸಮುದಾಯದ ಜೊತೆ ಕೈ ಜೋಡಿಸಿದ್ದು ವಿಶೇಷತೆ.






ಈ ವರ್ಷದ ಮತ್ತೊಂದು ವಿಶೇಷ ಹೆಜ್ಜೆ ಎಂದರೆ **"ಇಂಗ್ಲೀಷ್ ಡೇ".** ನಮ್ಮ ಶಾಲೆಯ ನಿಯೋಜಿತ ಶಿಕ್ಷಕಿಯಾದ ವಾಣಿ. ಪಿ.ಎಂ.ರವರು 30 ದಿನಗಳ English language empowerment training programme for primary school teachers ಎಂಬ ಇಂಗ್ಲೀಷ್ ಭಾಷಾ ತರಬೇತಿ ಪಡೆದುಕೊಂಡು ಬಂದು ಇಂಗ್ಲೀಷ್ ಡೇ ಆಚರಿಸುವ ಆಶಯ ವ್ಯಕ್ತ ಪಡಿಸಿದ್ದರು. ಅದಕ್ಕೆ ಎಸ್.ಡಿ.ಎಂ.ಸಿ, ಶಿಕ್ಷಕರು, ಪೋಷಕರು ಹಾಗು ಮಕ್ಕಳ ಸಹಕಾರ ಪಡೆದು ದಿನಾಂಕ–17–02–2018 ರಂದು ಇಂಗ್ಲೀಷ್ ಡೇ ಕಾರ್ಯಕ್ರಮವನ್ನು ಅದ್ದೂರಿಯಾಗಿ ಆಚರಿಸಲಾಯಿತು. ಈ ಕಾರ್ಯಕ್ರಮವನ್ನ ಬಿ.ಅರ್.ಸಿ ವಿಶಾಲಾಕ್ಷಿರವರು ಉದ್ಘಾಟಿಸಿದರು. ಬಿ.ಆರ್.ಪಿ. ಪ್ರವೀಣ್ ಡಿಸೋಜ, ಎಸ್.ಡಿ.ಎಂ.ಸಿ ಅಧ್ಯಕ್ಷರಾದ ಕೆ.ಕೆ.ಅಶ್ವಿನಿಕುಮಾರ್ ಹಾಗೂ ಎಸ್.ಡಿ.ಎಂ.ಸಿ ಸದಸ್ಯರುಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಆ ದಿನ ಮಕ್ಕಳು story telling, poetry singing, skits, dramas, dialogues, conversations and English dance ನ್ನ ಪ್ರದರ್ಶಿಸುವುದರ ಮೂಲಕ ನಾವು ಸಹ, ಇಂಗ್ಲೀಷ್‌ನ್ನು ಸುಲಲಿತವಾಗಿ ಮಾತನಾಡ ಬಲ್ಲೆವು ಎಂಬುದನ್ನ ಸ್ಪಷ್ಟ ಪಡಿಸಿದರು. ಅದರಲ್ಲೂ ಪುಟಾಣಿಗಳ ಇಂಗ್ಲೀಷ್ ಸಂಭಾಷಣೆ ಮತ್ತು ಇಂಗ್ಲೀಷ್ ನಾಟಕ ಪ್ರೇಕ್ಷಕರಲ್ಲಿ ಆಶ್ಚರ್ಯ ಉಂಟು ಮಾಡಿತು. ಕೊನೆಯಲ್ಲಿ ಪೋಷಕರಿಂದ ಬಂದ ಆಭಿಪ್ರಾಯ ನಮ್ಮೆಲ್ಲರಿಗೂ ಸಾರ್ಥಕತೆಯನ್ನು ಉಂಟುಮಾಡಿತು. ನಮ್ಮ ಶಾಲೆಯ ಮಕ್ಕಳ ಸಂಖ್ಯೆ ಮುಂದಿನ ವರ್ಷದಲ್ಲಿ ಹೆಚ್ಚಳವಾಗುವ ಎಲ್ಲಾ ಲಕ್ಷಣಗಳನ್ನು ಕಂಡು ಖುಷಿಪಟ್ಟೆವು. ಯಾವ ಖಾಸಗಿ ಶಾಲೆಗಿಂತ ನಮ್ಮ ಶಾಲೆ ಯಾವುದರಲ್ಲೂ ಕಡಿಮೆ ಇಲ್ಲಾ ಎಂಬ ಅಭಿಪ್ರಾಯ ಪೋಷಕರಿಂದ ಬಂದಿದೆ. ಮಕ್ಕಳು ಉತ್ತಮವಾಗಿ ಭಾಗವಹಿಸಿ ಇಂಗ್ಲೀಷ್ ಕಬ್ಬಿಣದ ಕಡಲೆಯಲ್ಲವೆಂದು ತೋರಿಸಿಕೊಟ್ಟರು. ಈ ಇಂಗ್ಲೀಷ್ ಡೇ ಅನ್ನುವ ವಿನೂತನ ಕಾರ್ಯಕ್ರಮ ಹೊಸನಗರ ತಾಲ್ಲೂಕಿಗೆ ಪ್ರಥಮ ಎನ್ನಬಹುದು . ಹೀಗೆ ತರಬೇತಿ ಪಡೆದು ಅದನ್ನು ಅನುಷ್ಠಾನಕ್ಕೆ ತಂದ ಕೀರ್ತಿ ನಮ್ಮಶಾಲೆಗೆ ಅಂದರೆ ಆಂಗ್ಲಭಾಷಾ ಶಿಕ್ಷಕಿಯವರಾದ

ವಾಣಿ.ಪಿ.ಎಂ ಅವರಿಗೆ ಸಲ್ಲುತ್ತದೆ. ಇಂಗ್ಲೀಷ್ ಡೇ ಕಾರ್ಯಕ್ರಮದ ವಿಡಿಯೋ ರೆಕಾರ್ಡ್ ಮಾಡಿ ಡಯಟ್ ಗೆ ಕೊಡಲು ಸಿದ್ಧತೆ ನೆಡೆದಿದೆ.

ದಿನಾಂಕ 21–2–2018ರಂದು ರಾಷ್ಟ್ರೀಯ ಆವಿಷ್ಕಾರ್ ಯೋಜನೆ ಅಡಿಯಲ್ಲಿ ಮಕ್ಕಳನ್ನ ಆಯನೂರಿನ ಆಗಸ್ತ್ಯ ಫೌಂಡೇಶನ್, ಶಿವಮೊಗ್ಗದ ಇಂಜಿನಿಯರಿಂಗ್ ಕಾಲೇಜ್ , ಕೃಷಿ ವಿಜ್ಞಾನ ಕೇಂದ್ರಕ್ಕೆ ಕರೆದುಕೊಂಡು ಹೋಗಲಾಯಿತು ಮತ್ತು ದಿನಾಂಕ 28–2–18 ರಂದು ಶ್ರೀಮತಿ ಸವಿತಾ ಎಂ.ಎಸ್. ಹಾಗೂ ಅತಿಥಿ ಶಿಕ್ಷಕಿಯವರಾದ ಕುಮಾರಿ ಶೃತಿ. ಕೆ.ಎನ್.ರವರ ಮಾರ್ಗದರ್ಶನದಲ್ಲಿ ಮಕ್ಕಳೆ ತಯಾರಿಸಿದ ಪಾಠೋಪಕರಣಗಳ ಪ್ರದರ್ಶನ ಏರ್ಪಡಿಸಲಾಗಿತ್ತು. ಕಾರ್ಯಕ್ರಮದಲ್ಲಿ ಕ್ಷೇತ್ರ ಶಿಕ್ಷಣಾಧಿಕಾರಿಗಳಾದ ಶ್ರೀಯುತ ರಾಮಪ್ಪಗೌಡ ಹಾಗೂ ಬಿಆರ್‌ಪಿ, ಪತ್ರಕರ್ತರು, ಶಾಲಾ ಎಸ್.ಡಿ.ಎಂ.ಸಿ, ಮುಖ್ಯ ಶಿಕ್ಷಕರು, ಸಹ ಶಿಕ್ಷಕರು, ಪೋಷಕರು ಮತ್ತು ಮಕ್ಕಳು ಪಾಲ್ಗೊಂಡಿದ್ದರು. ಮಕ್ಕಳ ಸೃಜನಾತ್ಮಕ ಚಟುವಟಿಕೆಗೆ ಈ ಕಾರ್ಯಕ್ರಮ ಕೈಗನ್ನಡಿಯಾಗಿತ್ತು .ಈ ಕಾರ್ಯಕ್ರಮದ ಪ್ರಯುಕ್ತ ಚಿತ್ರಕಲಾ ಶಿಕ್ಷಕರಾದ ಆನಂದಪ್ಪ.ಎ.ಕೆ ರವರ ಮಾರ್ಗದರ್ಶನದಲ್ಲಿ ಚಿತ್ರಕಲಾ ಸ್ಪರ್ಧೆ ಏರ್ಪಡಿಸಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು ಹಾಗೂ **"ಆಧುನಿಕ ಜಗತ್ತಿಗೆ ವಿಜ್ಞಾನದ ಬೆಳವಣಿಗೆ ಪೂರಕವೇ, ಮಾರಕವೇ"** ಎಂಬ ವಿಷಯದ ಚರ್ಚಾ ಸ್ಪರ್ಧೆಯಲ್ಲಿ ವಿಜೇತರಾದ ಮಕ್ಕಳಿಗೆ ಬಹುಮಾನ ವಿತರಿಸಲಾಯಿತು.

ನಮ್ಮ ಶಾಲೆಯಲ್ಲಿ ನಾನು ಬಂದಾಗ Smart Class, LKG, UKG, 6 ಮತ್ತು 7ನೇ ತರಗತಿಯು ಅನಧಿಕೃತವಾಗಿ ಆಂಗ್ಲಮಾಧ್ಯಮದಲ್ಲಿ ನಡೆಯುತ್ತಿತ್ತು. ಆದರೆ 1 ಪದವೀಧರ ಮುಖ್ಯ ಶಿಕ್ಷಕ ಹುದ್ದೆ 1 ದೈ.ಶಿ, 1 ಚಿತ್ರಕಲೆ, 1 ಸಂಗೀತ, 1 ಹಿಂದಿ ಭಾಷಾ ಶಿಕ್ಷಕರು ಹಾಗೂ 2 ಸಾಮಾನ್ಯ ನಲಿ ಕಲಿ ಶಿಕ್ಷಕರನ್ನು ಮಾತ್ರ ಹೊಂದಿತ್ತು ಇದರಿಂದ ನಮಗೆ ಗುಣಮಟ್ಟದ ಶಿಕ್ಷಣ ಕೊಡಲು ಅಡಚಣೆಯಾಗುತ್ತಿತ್ತು. ಪ್ರಸ್ತುತ ಇಲಾಖೆಯಿಂದ 3 ಅತಿಥಿ ಶಿಕ್ಷಕರು ಹಾಗೂ ಎಸ್.ಡಿ.ಎಂ.ಸಿ ಯಿಂದ 5 ಗೌರವ ಶಿಕ್ಷಕರ ಸಹಕಾರದೊಂದಿಗೆ ಶಾಲೆ ನಡೆಯುತ್ತಿದೆ. ಹಾಗೂ ಒಬ್ಬರು ಆಂಗ್ಲ ಭಾಷಾ ಶಿಕ್ಷಕಿಯನ್ನು ಜಂಬಳ್ಳಿಯಿಂದ ನಮಗೆ ನಿಯೋಜನೆ ಮೂಲಕ ಇಲಾಖೆ ಒದಗಿಸಿ ಸಹಕರಿಸಿದೆ ಹಾಗೂ ಸಹಕರಿಸುತ್ತಿದೆ. ಬಿ.ಇ.ಒ ರಾಮಪ್ಪಗೌಡ ಸರ್ ಅವರ ಕಾಳಜಿಯಿಂದ 2018–19 ನೇ ಸಾಲಿನಲ್ಲಿ 6 ಮತ್ತು 7ನೇ ತರಗತಿಗೆ ಆಂಗ್ಲ ಮಾಧ್ಯಮ ಅಧೀಕೃತವಾಯಿತು. ಹಾಗೂ 2019–20 ನೇ ಸಾಲಿನಲ್ಲಿ 1 ನೇ ತರಗತಿ ಯಿಂದಲೇ ಆಂಗ್ಲ ಮಾಧ್ಯಮ ಸಹ ಮಂಜೂರು ಮಾಡಿರುತ್ತಾರೆ.

ಪ್ರಸ್ತುತ ಶಾಲೆಯಲ್ಲಿ ಮುಖ್ಯ ಶಿಕ್ಷಕರನ್ನು ಒಳಗೊಂಡಂತೆ 7 ಜನ ಶಿಕ್ಷಕರು, ಒಬ್ಬರು ನಿಯೋಜಿತ ಆಂಗ್ಲಭಾಷಾ ಶಿಕ್ಷಕಿ, 6 ಜನ ಗೌರವ ಶಿಕ್ಷಕರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಎಲ್.ಕೆ.ಜಿ ಯು.ಕೆ.ಜಿ ವಿಭಾಗದಲ್ಲಿ ಒಟ್ಟು 58 ಪುಟಾಣಿಗಳು, 1–7ನೇ ತರಗತಿಯ ಕನ್ನಡ ಮಾಧ್ಯಮದಲ್ಲಿ ಒಟ್ಟು 162 ಮಕ್ಕಳು ಹಾಗೂ 6–7 ನೇತರಗತಿ ಆಂಗ್ಲಮಾಧ್ಯಮದಲ್ಲಿ 39 ಮಕ್ಕಳು ಒಟ್ಟಾರೆ 259 ಮಕ್ಕಳು ವ್ಯಾಸಂಗ ಮಾಡುತ್ತಿದ್ದಾರೆ

ಒಟ್ಟಿನಲ್ಲಿ ಪಾಠ ಪ್ರವಚನ ಮಾತ್ರವಲ್ಲದೇ ಪ್ರತಿಭಾ ಕಾರಂಜಿ, ಕೃಷ್ಣ ಜನ್ಮಾಷ್ಟಮಿಯ ಕೃಷ್ಣವೇಷ ಸ್ಪರ್ದೆ, ತಾಲ್ಲೂಕು ಮಟ್ಟದ ಕ್ರೀಡಾಕೂಟ ಹೀಗೆ ಹಲವಾರು ಕಾರ್ಯಕ್ರಮಗಳಲ್ಲಿ ಮಕ್ಕಳನ್ನು ಸಕ್ರಿಯವಾಗಿ ತೊಡಗಿಸಿಕೊಂಡು ಅವರ ಸರ್ವತೋಮುಖ ಬೆಳವಣಿಗೆಯಲ್ಲಿ ಸಹಕಾರಿಯಾಗಿದೆ. ಇದಕ್ಕೆ ನಮ್ಮ ಶಾಲೆಯ ಸಹಶಿಕ್ಷಕರು ಹಾಗೂ ಸಿಬ್ಬಂದಿ ವರ್ಗದ ಸಹಕಾರ, ಎಸ್.ಡಿ.ಎಂ.ಸಿ ಪ್ರೋತ್ಸಾಹ ,ಪೋಷಕರ ಬೆಂಬಲ, ಜೊತೆಗೆ ಇಲಾಖೆಯ ಮಾರ್ಗದರ್ಶನದೊಂದಿಗೆ ನಮ್ಮ ಶಾಲೆಯಲ್ಲಿ ಗುಣಾತ್ಮಕ ಶಿಕ್ಷಣ ನೀಡುತ್ತಿರುವುದರಲ್ಲಿ ಸಂಶಯವಿಲ್ಲ ಎಂದು ತಿಳುಸುವುದರಲ್ಲಿ ಹೆಮ್ಮೆ ಎನ್ನಿಸುತ್ತದೆ. ಶಾಲೆಗಾಗಿ ಇನ್ನೊಂದು ವಾಹನ ಖರೀದಿ, ಇಂಗ್ಲೀಷ್ ಲ್ಯಾಬ್ ನಿರ್ಮಾಣ, ಅತ್ಯಾಧುನಿಕ ರೀತಿಯ ವಿಜ್ಞಾನ ಪ್ರಯೋಗಾಲಯದ ನಿರ್ಮಾಣ ನಮ್ಮ ಮುಂದಿರುವ ಕನಸುಗಳು. ಮುಂದಿನ ಶೈಕ್ಷಣಿಕ ವರ್ಷದಲ್ಲಿ ಕನಸನ್ನ ನನಸಾಗಿಸಲು ಬದ್ಧರಾಗುತ್ತೆವೆ.







